<u>ದಿನಾಂಕಃ **04-07-2025** ರಂದು ಸಾಕ್ಷಿದಾರನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀಮತಿ.ಬಿ.ಎಂ.ಆರ್. ವಕೀಲರಿಂದ :</u>

Computer Institute ಗೆ ನಾನು ಖರ್ಚು ಮಾಡಿರುವಾಗೇ ದಾಖಲೆಗಳನ್ನು ಹಾಕಿಲ್ಲ. ನಾನು ಖರ್ಚು ಮಾಡಿರುವುದಿಲ್ಲ ಆದ್ದರಿಂದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. computer institution 2013-2014 ರ ವರೆಗೂ ನಡೆದಿರುತ್ತದೆ, ನಂತರ ಸಂಸ್ಥೆಯು ನಷ್ಟದಲ್ಲಿ ಇರುತ್ತದೆ. ಬೇರೆ ಸಂಸ್ಥೆಗಳು ಬಂದಿದ್ದರಿಂದ ನಮ್ಮ ಸಂಸ್ಥೆಗೆ ದಾಖಲೆಗಳು ಕಡಿಮೆಯಾಗಿದ್ದರಿಂದ ನಷ್ಟದಲ್ಲಿ ಹೋಗಿರುತ್ತದೆ. ಸಂಸ್ಥೆಯಿಂದ ಬಂದಂತಹ ಹಣವನ್ನು ನನ್ನ ತಂದೆ ಕುಟುಂಬಕ್ಕೆ ಖರ್ಚು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಂಸ್ಥೆ ನಷ್ಟದಲ್ಲಿ ಹೋದ ನಂತರ ಶಿವಶಂಕರ ಇತನು ಜೋತಿಯವರಿಗೆ ಹಣದ ವಿಷಯದಲ್ಲಿ ಪಿಡಿಸುತ್ತಿದ್ದಾಗ ಜೋತಿಯವರು ಆತನ ವಿರುದ್ದ ಕ್ರಿಮಿನಲ್ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಶಿವಶಂಕರ ಗೊತ್ತಿರುವುದಿಲ್ಲ. ನನ್ನ ಕುಟುಂಬ ಜೋತಿ ಇವಳಿಗೆ ಕಿರುಕುಳ ನೀಡಿದ್ದರಿಂದ ಅವಳು ಸಾಯಲು ಪ್ರಯತ್ನಿಸಿದಳು ಎಂದರೆ ಸರಿಯಲ್ಲ. ಜೋತಿ ವಿರುದ್ದ ಕ್ರಿಮಿನಲ್ ಕೇಸ ಇದ್ದು ಅದರಲ್ಲಿ ಅವರು ತಪ್ಪು ಒಪ್ಪಿಕೊಂಡು ದಂಡ ತುಂಬಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು 2014 ರಲ್ಲಿ ಜೋತಿಗೆ ವಿಚ್ಚೇದನ ಕೊಡಲು ಪಿಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ತಕರಾರು ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರೀತಿಸಿ ಮದುವೆಯಾಗಿರುತ್ತೇನೆ ಎಂದು ಹೇಳಿ ಬರೆಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ಖರ್ಚು ವೆಚ್ಚು ಕೊಡಬೆಕಾಗುತ್ತದೆ ಎಂದು ನಾನು ಪ್ರೀತಿಸಿ ಮದುವೆಯಾಗಿರುತ್ತೇನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಕಲಬುರಗಿಯಲ್ಲಿ ನಾನು ಹೊಡಿ ಬಡಿ ಮಾಡಿದ್ದರಿಂದ ಜೋತಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಳು ಅವಳು ಠಾಣೆ ಹೋಗಿ ಪ್ರಕರಣ ಕೊಟ್ಟರು ಸಹ ದಾಖಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಪೊಲೀಸ್ ಇಲಾಖೆಯಲ್ಲಿ ಇದಿದ್ದರಿಂದ ನನ್ನ ವಿರುದ್ದ ಪ್ರಕರಣ ದಾಖಲಾಗದಂತೆ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗ ಪೋಟೊಗಳನ್ನು ನೋಡುತ್ತಿದ್ದು ಅವು ನಿಶ್ಚಿತಾರ್ಥ ಪೋಟೋ ಇರುತ್ತವೆ. ನಾನು ಈಗ ಕಡತದಲ್ಲಿ ಇದ್ದದಂತಹ ಪೋಟೊಗಳನ್ನು ನೋಡುತ್ತಿದ್ದು ಅವು ಮದುವೆ ಪೋಟೊ ಇರುತ್ತವೆ. ಸಾಮಾನ್ಯವಾಗಿ ಯಾರ ಕಡೆ ಮದುವೆ ಇರುತ್ತದೆಯೋ ಅವರು ಬ್ಯಾನರ್ ಹಾಕುತ್ತಾರೆ ಎಂದರೆ ಸರಿ. ನಮ್ಮ

ಮದುವೆಯಲ್ಲಿ ಜ್ಯೋತಿ ಕಡೆಯವರು ಬ್ಯಾನರ ಹಾಕಿರುತ್ತಾರೆ ಎಂದರೆ ಸರಿ. ಬ್ಯಾನರ್ ಜ್ಯೋತಿ ಅವರು ಹಾಕಿಸಿದ್ದರಿಂದ ಮದುವೆ ಖರ್ಚನ್ನು ಅವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆ ಖರ್ಚು ಮಾಡಿದ್ದರೆ ನನ್ನ ಬ್ಯಾನರ ಇರುತ್ತಿತ್ತು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜ್ಯೋತಿ ಅವರು ತಾಯಿ ಜೋತೆ ಶಹಾಪೂರದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಜ್ಯೋತಿ ಮಗ ಬೀದರನ ಖಾಸಗಿ ಶಾಲೆಯಲ್ಲಿ ಓದುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಜ್ಯೋತಿ ತಮ್ಮ ಗುಲ್ಬರ್ಗದಲ್ಲಿ ಇರುತ್ತಾನೆ ಎಂದರೆ ಸರಿ. ಜ್ಯೋತಿ ಇವಳು ಸಂಘ ನೋಡಿಕೊಂಡು ಹೋಗುತ್ತಿದ್ದಾಳೆ ಎಂದು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಮದುವೆ ನಂತರ ನಾನು ಸ್ವಲ್ಪ ದಿನಗಳ ವರೆಗೂ ಸರಿಯಾಗಿ ನೋಡಿಕೊಂಡು ನಂತರ ಜ್ಯೋತಿಗೆ ಕಿರುಕುಳ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಕುಟುಂಬ ಸದಸ್ಯರು ಜ್ಯೋತಿಗೆ ತವರು ಮನೆಯಿಂದ ಹಣ ತರಲು ಕಿರುಕಳು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯ ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ದಾಖಲೆಗಳು ನನಗೆ ಸಂಬಂಧ ಪಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಜೀನಾಂಶ ಕೊಡಬಾರದು ಎಂದು ಸುಳ್ಳು ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈಗಲೂ ಸಹ ಮೊಬೈಲ್ ಸೇಲ್ಸಮ್ಯಾನ ಎಂದು ಕೆಲಸ ಮಾಡುತ್ತೇನೆ, ನನಗೆ ಮಾಸಿಕ ವೇತನ ರೂ.40 ಸಾವಿರ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಜಮೀನಿಂದ ವಾರ್ಷಿಕ ಆಧಾಯ 4-5 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಜೀನಾಂಶ ಕೊಡುವ ಸಾಮರ್ಥ್ಯ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನ ವಿದ್ಯಾಭ್ಯಾಸ್ಯ ಖರ್ಚು ಕೊಡುವ ಬ್ಯಾದ್ಯತೆ ನನಗೆ ಇರುತ್ತದೆ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ನನಗೆ ಕೊಟ್ಟ ಉಡುಗೋರೆಯನ್ನು ಮರಳಿ ಕೊಡುವ ಬಾದ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಜ್ಯೋತಿ ಇವಳು ಮಾನಸಿಕವಾಗಿ ಕುಗ್ಗಿ ಹೋಗಿದ್ದರಿಂದ ಯಾವುದೇ ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಜ್ಯೋತಿ ತಾಯಿಗೆ ವಯಸ್ಸಾಗಿದ್ದರಿಂದ ಅವರನ್ನು ನೋಡಿಕೊಂಡು ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ಜ್ಯೋತಿ ಇವರ ತಾಯಿಗೆ ವಯಸ್ಸು ಆಗಿರುತ್ತದೆ ಎಂರದೆ ಸರಿ. ಜ್ಯೋತಿ ಅವರ ತಂದೆ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಜ್ಯೋತಿ ತನ್ನ ಹಾಗೂ ಮಗನ ಖರ್ಚುನ್ನು ನೋಡಿಕೊಳ್ಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಎಲ್ಲಾ

ಸಂಗತಿಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ.**
**ಶಹಾಪೂರ**